**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

ಸಿ.ಸಿ.ಸಂಖ್ಯೆ.798/2018

**ಪಿರ್ಯಾದಿಃ** ರಾಜ್ಯದ ಪರವಾಗಿ ಅಬಕಾರಿ ಉಪ ನಿರೀಕ್ಷಕರು,
ಕೊಳ್ಳೇಗಾಲ ವಲಯ, ಕೊಳ್ಳೇಗಾಲ.

**ವಿರುದ್ಧ**

**ಆರೋಪಿಃ** 1. ಶ್ರೀ. ಸಿ. ವೆಂಕಟೇಶ್ ಬಿನ್ ಲೇಟ್ ಚೆನ್ನಪ್ಪ, 34 ವರ್ಷ
**ವಾಸಃ** ಮಾರುತಿ ನಗರ, ಹನೂರು ಟೌನ್,
ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಆರೋಪಿಗಳ ಹೇಳಿಕೆ**

**ಪ್ರಶ್ನೆ**:1: ಅಭಿಯೋಜನೆ ಪರ ಸಾಕ್ಷಿಗಳು ನುಡಿದ ಸಾಕ್ಷ್ಯವನ್ನು ನೀವು ಕೇಳಿದ್ದೀರಾ ಹಾಗೂ ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ

**ಪ್ರಶ್ನೆ:2:** ಪ್ರಾಸಾ–1, ಶ್ರೀ. ಲೋಹಿತ್ ಕೆ.ವಿ., ಅಬಕಾರಿ ನಿರೀಕ್ಷಕರು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 15.05.2018 ರಂದು ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ದಿನಾಂಕ 14.05.2018 ರ ಮಧ್ಯ ರಾತ್ರಿಯಿಂದ ದಿನಾಂಕ 15.05.2018 ರ ಮಧ್ಯ ರಾತ್ರಿಯವರೆಗೆ ಚಾಮರಾಜನಗರ ಜಿಲ್ಲಾದ್ಯಂತ ಮದ್ಯ ಮಾರಾಟ ಸಾಗಾಣಿಕೆ ಮತ್ತು ಶೇಖರಣೆ ಹಾಗೂ ಹಂಚಿಕೆಯನ್ನು ನಿಷೇಧಿಸಿದ ದಿನ ಎಂದು ಘೋಷಿಸಿದ್ದ ಹಿನ್ನೆಲೆಯಲ್ಲಿ ಮದ್ಯ ಮಾರಾಟ ಮತ್ತು ಇತರೆ ಯಾವುದೇ ಇತರ ಮದ್ಯ ವಹಿವಾಟು ನಿಷೇದಿಸಿದ್ದು, ದಿನಾಂಕ 15.05.2018 ರಂದು ಕೊಳ್ಳೇಗಾಲ ವಲಯ ವ್ಯಾಪ್ತಿಯಲ್ಲಿ ಗಸ್ತು ನಡೆಸುತ್ತಿದ್ದಾಗ ದೊರೆತ ಮಾಹಿತಿ ಮೇರೆಗೆ ಕೊಳ್ಳೇಗಾಲ ತಾಃ, ರಾಮಾಪುರ ಹೋಬಳಿ, ನಾಲಾರೋಡ್–ಹೂಗ್ಯಂ ಗ್ರಾಮದ ಮೀಣ್ಯತ್ತು ಹಳ್ಳಕ್ಕೆ ನಿರ್ಮಿಸಿರುವ ಸೇತುವೆ ಹತ್ತೀರ ಆರೋಪಿಯಾದ

ನೀವು ಸಿಲ್ವರ್ ಬಣ್ಣದ ಮಾರುತಿ ಓಮ್ನಿ ಕಾರ್ ನಲ್ಲಿ ಹಠಾತ್ತನೆ ಎದುರುಗೊಂಡು ಇಲಾಖಾ ವಾಹನ ಹಾಗೂ ಸಮವಸ್ತ್ರ ದಲ್ಲಿದ್ದ ಅವರನ್ನು ಕಂಡು ಗಾಬರಿಗೊಂಡು ವಾಹನ ಬಿಟ್ಟು ಓಡಿಹೋಗಲು ಪ್ರಯಸಿದ್ದು, ಸಿಬ್ಬಂದಿಗಳು ತಡೆದು ನಿಲ್ಲಿಸಿ ಸದರಿ ಸ್ಥಳದಲ್ಲಿಯೇ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 54 ರ ರೀತ್ಯಾ ಪ್ರದತ್ತವಾದ ಅವಕಾಶವನ್ನು ಉಪಯೋಗಿಸಿಕೊಂಡು ಶೋಧನಾ ಸಮುಚ್ಚಿತ ಆಧಾರ ತಯಾರಿಸಿಕೊಂಡು ನಿಮ್ಮ ಸಹಿಯನ್ನು ಪಡೆದು ವಾಹನವನ್ನು ಪರಿಶೀಲಿಸಲಾಗಿ ಅದು ಸಿಲ್ವರ್ ಬಣ್ಣದ ಮಾರುತಿ ಓಮ್ನಿ ಕಾರಾಗಿದ್ದು, ಅದರ ನೋಂದಣಿ ಸಂಖ್ಯೆ ಕೆಎ-05-ಎಂಯು-285 ಆಗಿರುತ್ತದೆ. ಅದರ ಒಳಗಡೆ ಮದ್ಯದ ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿದ್ದು, 1 ನೇ ರಟ್ಟಿನ ಬಾಕ್ಸ್ ನಲ್ಲಿ 180 ಎಂ. ಎಲ್. ನ 48 ಟೆಟ್ರಾ ಪ್ಯಾಕುಗಳು, ಒರಿಜಿನಲ್ ಚಾಯ್ಸ್ ಬ್ರಾಂಡಿಯ ಒಟ್ಟು 8 ಮದ್ಯದ ರಟ್ಟಿನ ಪೆಟ್ಟಿಗೆಗಳು, 2 ನೇ ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ 48 ಟೆಟ್ರಾ ಪ್ಯಾಕುಗಳು ತ್ರಿ ಏಸಸ್ ವಿಸ್ಕಿ ಬ್ರಾಂಡಿಯ ಒಟ್ಟು 8 ಮಧ್ಯದ ರಟ್ಟಿನ ಪೆಟ್ಟಿಗೆಗಳು, 3 ನೇ ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ 48 ಟೆಟ್ರಾ ಪ್ಯಾಕುಗಳುಳ್ಳ ಓಲ್ಡ್ ಟವರಿನ್ ವಿಸ್ಕಿಯ ಒಟ್ಟು 2 ಮದ್ಯದ ರಟ್ಟಿನ ಪೆಟ್ಟಿಗೆಗಳು, 4 ನೇ ರಟ್ಟಿನ ಬಾಕ್ಸ್ ನಲ್ಲಿ 500 ಎಂ ಎಲ್ ನ 24 ಟಿನ್ನುಗಳು ಕೆ ಎಫ್ ಸ್ಟ್ರಾಂಗ್ ಪ್ರೀಮಿಯಂ ಬಿಯರ್ ನ ಒಟ್ಟು 4 ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿದ್ದು, ಒಟ್ಟು 155.520 ಲೀ. ಸಾಮರ್ಥ್ಯದ ಮದ್ಯ ಹಾಗೂ 48 ಲೀ. ಬಿಯರ್ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :3:** ಫ್ರಾಸಾ-1, ಶ್ರೀ. ಲೋಹಿತ್ ಕೆ.ವಿ., ಇವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಕರ್ನಾಟಕ ರಾಜ್ಯ ವಿಧಾನ ಸಾಭಾ ಸಾರ್ವತ್ರಿಕ ಚುನಾವಣೆ 2018 ರ ಮತ ಎಣಿಕೆಯ ನಿಮಿತ್ತ ಈ ದಿನ ಮಧ್ಯ ರಾತ್ರಿ 12.00 ಗಂಟೆಯವರೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರು ಜಿಲ್ಲಾದ್ಯಂತ ಮದ್ಯ ಮಾರಾಟ ಹಾಗೂ ಇತರೆ ಯಾವುದೇ ತರಹದ ಮಧ್ಯ ವಹಿವಾಟು ನಿಷೇದಿಸಿದ್ದರೂ ಇಷ್ಟೊಂದು ಪ್ರಮಾಣದ ಮದ್ಯ ಹಾಗೂ ಬಿಯರ್ ಎಲ್ಲಿ ದೊರೆಯಿತು ಎಂದು ಕೇಳಲಾಗಿ ನೀವು ಯಾವುದಕ್ಕೂ ಉತ್ತರಿಸಿರುವುದಿಲ್ಲ. ಈ ರೀತಿ ಅಕ್ರಮವಾಗಿ ಅದರಲ್ಲೂ ಒಣದಿನ ಆಚರಣೆ ಸಮಯದಲ್ಲಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುವುದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 10, 11, 14 ರ ರೀತ್ಯಾ ಅಪರಾಧವೆಂದು ತಿಳಿಸಿ ದೊರೆತ ಎಲ್ಲಾ ಮದ್ಯ ಹಾಗೂ ಬಿಯರ್ ಅನ್ನು ಸಾಗಾಣೆ ಮಾಡಲು ಬಳಕೆಯಾಗಿದ್ದ ಓಮ್ನಿ ಕಾರಿನೊಂದಿಗೆ ನಿಯಮಾನುಸಾರ ಕ್ರಮ ಜರುಗಿಸಿ ಜಪ್ತು ಪಡಿಸಿಕೊಳ್ಳಲಾಯಿತು ಹಾಗೂ ನಿಮ್ಮ ವಿವರವನ್ನು ಕೇಳಲಾಗಿ

ನೀವು ನಿಮ್ಮ ಹೆಸರು ಸಿ.ವೆಂಕಟೇಶ್ ಬಿನ್ ಲೇಟ್ ಚೆನ್ನಪ್ಪ, ಮಾರುತಿನಗರ, ಹನೂರು ಟೌನ್ ಎಂದು ತಿಳಿಸಿರುತ್ತೀರಿ, ನಂತರ ಮುದ್ದೆಮಾಲು, ವಾಹನ ಹಾಗೂ ನಿಮ್ಮನ್ನು ದಸ್ತಗಿರಿ ಮಾಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :4:** ಫ್ರಾಸಾ–2, ಶ್ರೀ. ಎಂ.ಎನ್ ಸುಂದ್ರಪ್ಪ, ಅಬಕಾರಿ ಮುಖ್ಯ ಪೇದೆ, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ: 15.05.2018 ರಂದು ವಿಧಾನಾಸಭಾ ಸಾರ್ವಜನಿಕ ಚುನಾವಣೆ ನೀತಿ ಸಂಹಿತೆಯಂತೆ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಮದ್ಯ ಮಾರಾಟ ನಿಷೇಧ ಇದ್ದ ಕಾರಣ ಅವರು, ಚಾಸಾ 1, ಚಾಸಾ 5 ರಿಂದ ಚಾಸಾ 7 ರವರೊಟ್ಟಿಗೆ ಇಲಾಖಾ ವಾಹನ ಕೆಎ 10 ಜಿ 567 ರಲ್ಲಿ ಗಸ್ತಿನಲ್ಲಿದ್ದಾಗ ಹೂಗ್ಯಂ ಗ್ರಾಮದ ಮಿಣ್ಣೆತ್ತು ಹಳ್ಳದ ಸೇತುವೆಯ ಬಳಿ ನೀವು ಸಿಲ್ವರ್ ಬಣ್ಣದ ಓಮ್ನಿ ವಾಹನದಲ್ಲಿ ಅನುಮಾಸ್ಪದವಾಗಿ ಇರುವುದು ಕಂಡು ಬಂದು, ಶೋಧನ ಸಮುಚಿತ ಆಧಾರ ತಯಾರಿಸಿಕೊಂಡು ನಿಮ್ಮನ್ನು ವಿಚಾರಣೆ ಮಾಡಿ ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ 180 ಎಂ ಎಲ್ ನ ತಲಾ 48 ಪ್ಯಾಕ್ ಇದ್ದ ಒರಿಜಿನಲ್ ಚಾಯ್ಸ್ ಬ್ರಾಂಡಿಯ ಒಟ್ಟು 8 ರಟ್ಟಿನ ಬಾಕ್ಸ್ (2) 180 ಎಂ ಎಲ್ ನ ತಲಾ 48 ಪ್ಯಾಕ್ ಇದ್ದ ತ್ರಿಏಸಸ್ ವಿಸ್ಕಿಯ ಬ್ರಾಂಡಿನ 8 ರಟ್ಟಿನ ಬಾಕ್ಸ್ (3) 180 ಎಂ ಎಲ್ ನ ತಲಾ 48 ಪ್ಯಾಕ್ ಇದ್ದ ಓ ಟಿ ವಿಸ್ಕಿಯ 2 ರಟ್ಟಿನ ಬಾಕ್ಸ್ (4) 500 ಎಂ ಎಲ್ ನ 24 ಟಿನ್ ಗಳು ಇದ್ದ ಕೆ ಎಫ್ ಸ್ಟ್ರಾಂಗ್ ಬಿಯರ್ ನ 4 ರಟ್ಟಿನ ಬಾಕ್ಸ್ ಗಳು ಇರುವುದು ಕಂಡು ಬಂದಿದ್ದು, ಚಾಸಾ 1ರವರು ನಿಮ್ಮನ್ನು ವಿಚಾರಣೆ ಮಾಡಿದಾಗ ಸದರಿ ಮದ್ಯದ ಪೌಚ್ ಗಳನ್ನು ಸಾಗಾಣಿಕೆ ಮಾಡಲು ಯಾವುದೇ ರಹದಾರಿ ಇರುವುದಿಲ್ಲ ಎಂದು ನೀವು ತಿಳಿಸಿದ್ದು. ನಿಮ್ಮ ಹೆಸರು, ವಿಳಾಸನ್ನು ಚಾಸಾ 1ರವರು ವಿಚಾರಣೆ ಮಾಡಿದಾಗ ನೀವು ನಿಮ್ಮ ಹೆಸರು ಸಿ ವೆಂಕಟೇಶ್ ಬಿನ್ ಚೆನ್ನಪ್ಪ, ಮಾರುತಿ ನಗರ, ಹನೂರು ಪಟ್ಟಣ ಎಂದು, ಸದರಿ ಮದ್ಯ ಪೌಚ್ ಗಳನ್ನು ಮಾರಾಟ ಮಾಡಲು ಹೊಂದಿರುವುದಾಗಿ ತಿಳಿಸಿರುತ್ತೀರಿ, ದೊರೆತ ಎಲ್ಲಾ ಮದ್ಯವನ್ನು ಚಾಸಾ–1 ರವರು ಅವರ ಸಮಕ್ಷಮ ಮಹಜರ್ ಕ್ರಮದ ಮೂಲಕ ತಮ್ಮ ವಶಕ್ಕೆ ಪಡೆದುಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :5:** ಫ್ರಾಸಾ–3, ಶ್ರೀ. ರಮೇಶ್ ಎಂ., ಅಬಕಾರಿ ಮುಖ್ಯ ಪೇದೆ, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 15.05.2018 ರಂದು ರಾಜ್ಯ ವಿಧಾನಾಸಭಾ ಸಾರ್ವಜನಿಕ ಚುನಾವಣೆ ನೀತಿ

ಸಂಹಿತೆಯಂತೆ ಮಧ್ಯ ಮಾರಾಟ ನಿಷೇಧ ಇದ್ದ ಕಾರಣ ಚಾಸಾ–1 ರವರೊಂದಿಗೆ ಅವರು ಚಾಸಾ 5 ರಿಂದ ಚಾಸಾ 7 ರವರೊಟ್ಟಿಗೆ ಇಲಾಖಾ ವಾಹನ ಕೆಎ 10 ಜಿ 567 ರ ಲ್ಲಿ ಗಸ್ತಿನಲ್ಲಿದ್ದಾಗ ಹೂಗ್ಯಂ ಗ್ರಾಮದ ಮಿಣ್ಣೆತ್ತು ಹಳ್ಳದ ಸೇತುವೆಯ ಬಳಿ ನೀವು ಸಿಲ್ವರ್ ಬಣ್ಣದ ಓಮ್ನಿ ವಾಹನದಲ್ಲಿ ಅನುಮಾಸ್ಪದವಾಗಿ ಇರುವುದು ಕಂಡು ಬಂದು, ಶೋಧನ ಸಮುಚಿತ ಆಧಾರ ತಯಾರಿಸಿಕೊಂಡು ನಿಮ್ಮನ್ನು ವಿಚಾರಣೆ ಮಾಡಿ ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ 180 ಎಂ ಎಲ್ ನ ತಲಾ 48 ಪ್ಯಾಕ್ ಇದ್ದ ಒರಿಜಿನಲ್ ಚಾಯ್ಸ್ ಬ್ರಾಂಡಿಯ ಒಟ್ಟು 8 ರಟ್ಟಿನ ಬಾಕ್ಸ್ (2) 180 ಎಂ ಎಲ್ ನ ತಲಾ 48 ಪ್ಯಾಕ್ ಇದ್ದ ತ್ರಿ ಏಸಸ್ ವಿಸ್ಕಿಯ ಬ್ರಾಂಡಿನ 8 ರಟ್ಟಿನ ಬಾಕ್ಸ್ (3) 180 ಎಂ ಎಲ್ ನ ತಲಾ 48 ಪ್ಯಾಕ್ ಇದ್ದ ಓ ಟಿ ವಿಸ್ಕಿಯ 2 ರಟ್ಟಿನ ಬಾಕ್ಸ್ (4) 500 ಎಂ.ಎಲ್ ನ 24 ಟಿನ್ ಗಳು ಇದ್ದ ಕೆ ಎಫ್ ಸ್ಟ್ರಾಂಗ್ ಬಿಯರ್ ನ 4 ರಟ್ಟಿನ ಬಾಕ್ಸ್ ಗಳು ಇರುವುದು ಕಂಡು ಬಂದಿತು ಚಾಸಾ–1 ರವರು ನಿಮ್ಮನ್ನು ವಿಚಾರಣೆ ಮಾಡಿದಾಗ ಸದರಿ ಮಧ್ಯದ ಪೌಟ್ ಗಳನ್ನು ಸಾಗಾಣಿಕೆ ಮಾಡಲು ಯಾವುದೇ ರಹದಾರಿ ಇರುವುದಿಲ್ಲ ಎಂದು ತಿಳಿಸಿದ್ದು, ಹೆಸರು ವಿಳಾಸನ್ನು ವಿಚಾರಣೆ ಮಾಡಿದಾಗ ನೀವು ನಿಮ್ಮ ಹೆಸರು ಸಿ.ವೆಂಕಟೇಶ್ ಬಿನ್ ಚೆನ್ನಪ್ಪ, ಮಾರುತಿ ನಗರ, ಹನೂರು ಪಟ್ಟಣ ಎಂದು, ಸದರಿ ಮಧ್ಯ ಪೌಚ್ ಗಳನ್ನು ಮಾರಾಟ ಮಾಡಲು ಹೊಂದಿರುವುದಾಗಿ ತಿಳಿಸಿರುತ್ತೀರಿ, ದೊರೆತ ಎಲ್ಲಾ ಮಧ್ಯವನ್ನು ಚಾಸಾ–1 ರವರು ಅವರ ಸಮಕ್ಷಮ ಮಹಜರ್ ಕ್ರಮದ ಮೂಲಕ ತಮ್ಮ ವಶಕ್ಕೆ ಪಡೆದುಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :6:** ಪ್ರಾಸಾ–4, ಶ್ರೀ. ಟಿ.ರಾಮೇಗೌಡ, ನಿವೃತ್ತ ಅಬಕಾರಿ ಉಪ–ನಿರೀಕ್ಷಕರು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 01.06.2018 ರಂದು ಪ್ರಕರಣದ ಕಡತ ಹಾಗೂ ಮುದ್ದೆ ಮಾಲುಗಳನ್ನು ಚಾಸಾ–1 ರವರಿಂದ ಪಡೆದುಕೊಂಡು, ನಂತರ ತನಿಖೆಯಿಂದ ನಿಮ್ಮ ವಿರುದ್ಧ ಆರೋಪ ಸಾಭೀತಾದ ಕಾರಣ ದಿಃ 03.10.2018 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ 7**: ನೀವು ಈ ಪ್ರಕರಣದ ಬಗ್ಗೆ ಬೇರೆ ಹೆಚ್ಚಿನ ವಿಷಯವನ್ನೇನಾದರೂ ಹೇಳುವುದು ಇದೆಯೇ?

ಉತ್ತರಃ

**ಪ್ರಶ್ನೆ :8**: ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷ್ಯವನ್ನು ಅಥವಾ ದಾಖಲೆಗಳನ್ನು ಹಾಜರು ಪಡಿಸುತ್ತೀರೋ?

ಉತ್ತರಃ

(ನನ್ನ ಸಮಕ್ಷಮದಲ್ಲಿ ಆರೋಪಿ ವಿಚಾರಣೆಯನ್ನು ನಡೆಸಿದ್ದು, ಆರೋಪಿ ನೀಡಿದ ಉತ್ತರಗಳನ್ನು ಯಥಾವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ 29ನೇ ಜೂನ್ ಮಾಹೆ 2026.

**(ಎಂ. ರಂಜಿತ್ ಕುಮಾರ್)**
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.